ತಾರೀಖು 26ನೇ ಫಿಬ್ರವರೀ 1884.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಜಂಗ್ಲಿಗಳು ಅಂದರೆ (ದೇವರಾಯದುರ್ಗ ಮತ್ತು ಮದ್ದಗಿರಿ ಜಂಗ್ಲಿಗಳು ವಿನಾ) ಉಳಿದ ಇದರಡಿಕಂಡ ತಾಲ್ಲೂಕುಗಳು ದೇಖಲೀ ವಟ್ಟು ಡಿಸ್ಟ್ರಿಕ್ಟಿಗೆ ಸೇರಿದ ಜಂಗ್ಲಿಗಳ ಬಾಬತು ಸ್ಯ 1884—85, 1885—86, 1886—87 ಈ ಮೂರು ಸರಕಾರ್ ಸಾಲ್‌ಗಳಲ್ಲಿಯ ಆರಗಿನ ಇಜಾರೇಯು ತುಮಕೂರು ಮೊಕ್ಕಾಂ ಡೆಪ್ಯೂಟಿ ಕಮ್ಮಿಷನರವರ ಆಫೀಸಿನಲ್ಲಿ 1884ನೇ ಇಸವಿ ಮಾರ್ಚೀ 30ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆ.

ತುಮಕೂರು.	..	ತಿಪಟೂರು.
ಮದ್ದಗಿರಿ.	..	ಪಾವಗಡ.
ಚಿಕ್ಕನಾಯಕನಹಳ್ಳಿ.	..	ಚಿತ್ರದುರ್ಗ.
ಶೀರಾ.	..	ಹೊಳಲಕೆರೆ.
ಗುಬ್ಬಿ.	..	ಹಿರಿಯೂರು.

2. ಚಡ್ಡರಖಾಸ್ತುದಾರನು, ಇಜಾರೆಯು ಅವನ ಹೆಸರಿಗೆ ನಿಂತ ಕೂಡ್ಲೆ ವಟ್ಟು ಇಜಾರೆ ಮೊಬಲಗು ಪೈಕೀ ನಾಲ್ಕು ಖಿಸ್ತಿಗೆ ಸಮನಾದ ಮೊಬಲಗನ್ನು ನಗದಾಗಿಯಾಗಲಿ ಕರ್ಜಿಸಿ ನೋಟುಗಳ ಮೂಲಕವಾಗಲಿ ಡಿಪಾಜಿಟ್ ಇಡತಕ್ಕದ್ದು. ಹಾಗೆ ಇಡುವದಕ್ಕೆ ತಪ್ಪಿದರೆ ಇಜಾರೆಯು ಕೂಡ್ಲೆ ಅವನಿಗೆ ಲುಕ್ಸಾನಕರವಾಗಿ ಹರಾಜುಮಾಡಲ್ಪಟ್ಟ ಹಾಂಗೆ ಹರಾಜು ಮಾಡುವದರಿಂದ ಉಂಟಾಗಬಹುದಾದ ಯಾವ ನಷ್ಟಕ್ಕಾಗಲಿ ಅವನನ್ನ ಗುರಿಮಾಡಲ್ಪಡುವದು.

3. ಆಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ಇಜಾರೆ ಕೆಲಸದ ಮೇಲೆ 1884ನೇ ಇಸವಿ ಏಪ್ರಿಲ್ ಗುರ್ತೀತಾರೀಖಿನಲ್ಲಿ ಪ್ರವೇಶಿಸತಕ್ಕದ್ದು, ಮತ್ತು ಅವನು ಮೊದಲನೇ ತಿಂಗಳ ಖಿಸ್ತನ್ನು 1884ನೇ ಇಸವಿ ಮೇ 15ನೇ ಮರ್ತುಂನಲ್ಲಾಗಲಿ ಯಾ ತತ್ಪೂರ್ವದಲ್ಲಾಗಲಿ ಪಾವತೀಮಾಡದೇಕಲ್ಲದೆ ತರುವಾಯದ ಯಲ್ಲ ಮೂಹೆವಾರಿ ಖಿಸ್ತುಗಳನ್ನೂ ಪ್ರತಿ ಮಾರನೇ ತಿಂಗಳ 15ನೇ ತಾರೀಖಿನೊಳಗಾಗಿ ಪಾವತೀ ಮಾಡತಕ್ಕದ್ದು; ಈ ಬಾಬತು ಮಾಹೆವಾರಿ ಖಿಸ್ತು ಮೊಬಲಗು ಪಾವತೀ ಮಾಡುವದರಲ್ಲಿ ಡಿಪಾಜಿಟ್ ಇಡಲ್ಪಟ್ಟ ಮೊಬಲಗು ಲೆಕ್ಕಕ್ಕೆ ಸೇರಿಸಿಕೊಳ್ಳಲ್ಪಡಲಾರದು, ಪರಂತು ಸದರೀ ಡಿಪಾಜಿಟ್ ಮೊಬಲಗು ಇಜಾರೆಯಕಡೇ ನಾಲ್ಕು ಖಿಸ್ತುಗಳಿಗಾಗಿ ಜಮಾ ತೆಗದುಕೊಳ್ಳಲ್ಪಡುವದು.

4. ಇಜಾರೆದಾರನಿಂದ ಪಾವತೀಮಾಡಲ್ಪಡುವ ಮಾಹೇವಾರಿ ಖಿಸ್ತು ಮೊಬಲಗಿನ ಮೇಲೆ ರೂಪಾಯಿ ವಂದಕ್ಕೆ ವಂದಾಣೆಯಂತೆ ಲೋಕಲ್ ಸೆಸ್ ಚಾರ್ಜ್ ಮಾಡಲ್ಪಡುವದು.

5. ಮೇಲ್ಕಂಡ ಖಿಸ್ತು ಮೊಬಲಗುಗಳು ಕ್ರಮವಾಗಿ ಯರಡು ತಿಂಗಳವರಿಗೆ ಪಾವತೀ ಮಾಡಲ್ಪಡುವದಕ್ಕೆ ತಪ್ಪಿದರೆ ಯಾ ಸಾವ ಕಾಶವಾದರೆ ಇಜಾರೆಯು ಪೂರ್ತಿಯಾಗಿ ರದ್ದುಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು, ಮತ್ತು ತಪ್ಪಿಹೋದ ಕಂಟ್ರಾಕ್ಟುದಾರನಿಗೆ ಲುಕ್ಸಾನಕರವಾಗಿ ಇಜಾರೆಯು ಪುನಶ್ಚ ಹರಾಜು ಮಾಡಲ್ಪಡುವವಲ್ಲದೆ, ಡಿಪಾಜಿಟ್ ಇಡಲ್ಪಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೆದಾರನು ತನ್ನ ಇಜಾರೆಯ ಬಲದಿಂದ ಜಂಗ್ಲಿಗಳಲ್ಲಿ ತಾನು ಅರಗು ಜಮಾಯಿಸುವಂಥಾ ಮರಗಳನ್ನು ಕಡಿಯುವದಕ್ಕಾಗಲಿ, ಸಾಗಿಸುವದಕ್ಕಾಗಲಿ ಅಥವಾ ಊನು ಪಡಿಸುವದಕ್ಕಾಗಲಿ ಅಧಿಕಾರ ಉಂಟಾಗಿರುವದಿಲ್ಲ.

7. ಕಂಟ್ರಾಕ್ಟುದಾರನು ಮಂಜೂರ್ಮಾಡಲ್ಪಟ್ಟ ಇನಾಂದಾರ್ರುಗಳ ಹಕ್ಕುದಾರಿಗಳಲ್ಲಿ ಪ್ರವೇಶಿಸಕೂಡದು.

8. ಡೆಪ್ಯೂಟಿ ಕಮ್ಮಿಷನರವರು ಯಾವ ಸಲಾನ್ನಾಗಲಿ ಯಾವ ಸಬಬೂ ತೋರಿಸದೆ, ಅಂಗೀಕರಿಸುವ ಯಾ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡು ಇರುತ್ತಾರೆ.

ಮಹಮ್ಮದ್ ಅಲಿ, ಕೆ. ಬಿ.,
ಆಫಿಷಿಯೇಟಿಂಗ್ ಡೆ॥ ಕಮ್ಮಿಷನರ್.